BKN-01

Sl.No. : **Total No. of Pages : 3**

ಪ್ರಥಮ ವರ್ಷದ ಬಿ.ಎ./ಬಿ.ಕಾಂ. ವಾರ್ಷಿಕ/ಪೂರಕ ಪರೀಕ್ಷೆ, ಸೆಪ್ಟೆಂಬರ್/ಅಕ್ಟೋಬರ್–2023

(SLM Scheme)

ಕನ್ನಡ ಭಾಷೆ (ಪತ್ರಿಕೆ–೧)

ಸವಿಸ್ತರ ಮತ್ತು ಅವಿಸ್ತರ ಪಠ್ಯಗಳು

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು, ಪ್ರಬಂಧ ಮತ್ತು ಆಡಳಿತ ಕನ್ನಡ)

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.*

ವಿಭಾಗ–ಎ

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು : 20 ಅಂಕಗಳು)

ಪ್ರ1) ಎರಡರ ಭಾವವನ್ನು ಸಂದರ್ಭ ಸಹಿತ ವಿವರಿಸಿ: **[2×4=8]**

೧) ಮೆಲ್ಲಗಿವಳನು ಮುಟ್ಟು
ಮರುಗಿ ಹಿಡಿದೆತ್ತು
ಏನು ಕೋಮಲಕಾಯ।
ಹೊಳಪು ಹೊಸಪ್ರಾಯ।

ಅಥವಾ

ಇವಳೆನಗೆ ಸರ್ಪಗಾವಲು. ಹೊಸಿಲದಾಟಿದರೆ
ಬಾಗಿಲಿಗೆ ಬಂದು ಕಾಡುವಳು..... ಸಂಜೆಯತನಕ
ತಾಯ ಬಳಿ ಇವಳ ಅಧಿಕಾರ. ನಡುರಾತ್ರಿಯಲ್ಲಿ
ನನ್ನೆದೆಗೆ ಇವಳು ದೇವರ ಪದಕ

೨) ಹಾಗಾದ್ರೆ ನನಗೆ ದಿಕ್ಕೇ ಇಲ್ಲವೆ? ನೀವು ನನ್ನ ಪ್ರಾಮಾಣಿಕತೆ
ನೋಡಿಯಾದರೂ ಬಿಡುಗಡೆ ಮಾಡೋಲ್ಲವೆ? (ಮೌನ)
ನಾನೊಬ್ಬ ದುರ್ಬಲ ಜೀವಿ, ನನಗೆ ಸಹಾಯ ಮಾಡಿ, ನನ್ನ
ಜೀವ ಉಳಿಸಿ.

ಅಥವಾ

ಏನ ಆಗೇತಿ ಧಾಡಿ ನಿನಗ?
ಏನ ದೆಸೀ ತಿರಗೇತಿ ನಿನಗ?
ಗಾಳಿ–ಪಾಳಿ ಹೊಕ್ಕತೇನ ಮೈಯಾಗ?

ಪ್ರ2) ಎಂಟು ಪದಗಳಿಗೆ ಅರ್ಥ ಬರೆಯಿರಿ: **[8×½=4]**

ಚಿಕ್ಕ, ಮಾಯಿ, ಪಿಕ, ಟೊಂಗೆ, ಆರ್ಷ, ಕಾಫರ,

ಸುರಳೀತ, ಕಾರಬಾರ, ಕೆಪ್ಪು, ಹಚ್ಚಡ, ಪಟಗ, ಖಿಲಾಸ್.

ಪ್ರ3) ಯಾವ ಪಠ್ಯವನ್ನೂ ಬಿಡದೆ ನಾಲ್ಕಕ್ಕೆ ಸಂದರ್ಭ ಸ್ವಾರಸ್ಯ ಬರೆಯಿರಿ. **[4×2=8]**

೧) ಇದು ಅಗಸ್ತ್ಯನ ತಪದ ಮಣಿ, ಕಾವೇರಿ ತಾಯ ತವರ್ಮನೆ,

೨) ಉರಿಯುವವನೆ ಬಲ್ಲ.

೩) ಮುತ್ತಜ್ಜ ಕಟ್ಟಿದ ಮನೆ ದೀಪ ಹಚ್ಚುವರಿಲ್ಲ.

೪) ಬಯಕೀ ಬುತ್ತಿ ಯಾವಾಗ ತರಲಿ.

೫) ಕಾಗಿ ಕಣ್ ಬಿಟ್ರೆ ಎಲ್ಲ ನಾಶಾ ಅಂತ.

೬) ಆನೆ ನೋಡಾಕ್ಬಂದು ಆಡು ನೋಡಿದಂಗಾತು.

ವಿಭಾಗ–ಬಿ

(ಹೊಸಗನ್ನಡ ಕವಿತೆಗಳು, ಏಕಾಂಕ ನಾಟಕಗಳು : 30 ಅಂಕಗಳು)

ಪ್ರ4) ಎರಡು ಪ್ರಶ್ನೆಗಳಿಗೆ ಉತ್ತರಿಸಿ: **[2×10=20]**

೧) ಕುವೆಂಪು ಅವರ ಪ್ರಗತಿಪರ ದೃಷ್ಟಿಕೋನದ ಪ್ರತೀಕ 'ಶ್ರೀಸಾಮನ್ಯರ' ದೀಕ್ಷಾಗೀತೆ ಹೇಗೆ? ವಿವರಿಸಿ.

ಅಥವಾ

ವರ್ಧಮಾನ ಕವಿತೆಯ ವಸ್ತು ಮತ್ತು ಆಶಯಗಳನ್ನು ಕುರಿತು ಬರೆಯಿರಿ.

೨) ವೇಣಕ್ಕ "ಬಹಿರಂಗದಲ್ಲಿ ಸನಾತನವಾದಿಯಾಗಿದ್ದು. ಅಂತರಂಗದಲ್ಲಿ ಮಾನವತಾವಾದಿಯಾಗಿದ್ದಾಳೆ" – ಚರ್ಚಿಸಿ.

ಅಥವಾ

'ತೆರೆಗಳು' ನಾಟಕದಲ್ಲಿ ಕಿಟ್ಟಿಯ ಪಾತ್ರದ ವೈಶಿಷ್ಟ್ಯವನ್ನು ವಿವರಿಸಿ.

ಪ್ರ5) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: **[2×5=10]**

೧) ಪುರುಷಸೂಕ್ತ ಕವನದ ವಸ್ತು

ಅಥವಾ

ರಾಣಿ ತಿಮ್ಮಿಯ ಸಿಂಹಾಸನ ಕವನದ ಆಶಯ.

೨) ಚಂದ್ರಕಾಂತ್ ಕುಸುನೂರ.

ಅಥವಾ

ಟಿಂಗರ ಬುಡ್ಡಣ್ಣ

ವಿಭಾಗ–ಸಿ

(ಪ್ರಬಂಧ ಮತ್ತು ಆಡಳಿತ ಕನ್ನಡ : 30 ಅಂಕಗಳು)

ಪ್ರ6) ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ: **[2×10=20]**

೧) ಮೈಸೂರು ರುಮಾಲು ಮತ್ತು ಇನ್ನಿತರ ರುಮಾಲುಗಳ ವೈವಿಧ್ಯತೆಯನ್ನು ವಿವರಿಸಿ.

ಅಥವಾ

'ಮಕ್ಕಳು ಎಷ್ಟೇ ಬೆಳೆಯಲಿ ಅವು ಬಾಲ್ಯದಲ್ಲಿ ನಮಗಿತ್ತ ಸುಖದ ನೆನಪೇ ಸಾಕು' ಈ ಹೇಳಿಕೆಯನ್ನು ವಿವರಿಸಿ.

೨) ಆಡಳಿತ ಕನ್ನಡ ಭಾಷೆ ನಡೆದು ಬಂದ ದಾರಿಯನ್ನು ಕುರಿತು ವಿವರಿಸಿ.

ಅಥವಾ

ಅರೆಸರ್ಕಾರಿ ಪತ್ರ ಎಂದರೇನು? ಬರೆಯುವ ಸಂದರ್ಭಗಳಾವುವು? ಮಾದರಿ ಪತ್ರವೊಂದನ್ನು ರಚಿಸಿ.

ಪ್ರ7) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ: **[2×5=10]**

೧) ನನ್ನ ಟೋಪಿ

ಅಥವಾ

ನಿದ್ರಾಭ್ಯಾಸ

೨) ಸುತ್ತೋಲೆ

ಅಥವಾ

ಕನ್ನಡ ಮತ್ತು ಕಂಪ್ಯೂಟರ್.

● ● ●